4.10 ಪಿಎಂ

ಅಧ್ಯಕ್ಷರು : ಮಲ್ಲಿಕಾರ್ಜುನ ಖರ್ಗೆಯವರೇ, ಶೂನ್ಯ ವೇಳೆ ನೋಟೀಸ್‌ಗಳು 20 ಇವೆ. ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್ ಕಡೆಯಿಂದ ಒಂದು ಸ್ಟೇಟ್‌ಮೆಂಟ್ ಆಗಬೇಕು. ಮಾನ್ಯ ನಾಣಯ್ಯನವರು ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಫೈನಾನ್‌ಷಿಯಲ್ ಬಿಸಿನೆಸ್ ಅಂದರೆ ಡಿಮ್ಯಾಂಡ್ಸ್ ಮೇಲೆ ಡಿಸ್‌ಕಷನ್ ಈವತ್ತೂ ಆಗುವುದಿಲ್ಲ. ಇದು ಮುಗಿಯುವ ಹೊತ್ತಿಗೆ ಸಮಯವಾಗುತ್ತದೆ. ಇವತ್ತು ಕಡೆ ದಿವಸ ನಾವು ಊರಿಗೆ ಹೋಗಬೇಕು ಬೇಗ ಸದನವನ್ನು ಮುಂದೂಡಿ ಎಂದು ಚೀಟಿಗಳು ಬರುತ್ತಾ ಇದೆ. ನಾವು ಫೈನಾನ್‌ಷಿಯಲ್ ಬಿಸಿನೆಸ್ ತೆಗೆದುಕೊಂಡರೆ ಕಷ್ಟವಾಗುತ್ತದೆ. ತಾವೆಲ್ಲರೂ ಒಪ್ಪಿಕೊಂಡರೆ ಶೂನ್ಯ ವೇಳೆ ನೋಟಿಸನ್ನು ಸಸ್ಪೆಂಡ್ ಮಾಡುತ್ತೇನೆ. Immediately I will take up discussion on demands. Don't you think that is more useful?

ಶ್ರೀ ವಾಟಾಳ್‌ನಾಗರಾಜ್ : ಶೂನ್ಯ ವೇಳೆ ಪ್ರಸ್ತಾಪ ಮಾಡುವುದಕ್ಕೆ ಒಂದೊಂದು ನಿಮಿಷ ಅವಕಾಶ ಮಾಡಿಕೊಡಿ. ಇದು ಬಹಳ ಪ್ರಾಮುಖವಾಗಿರುತ್ತದೆ. 25 ನಿಮಿಷದಲ್ಲಿ ಮುಗಿದು ಹೋಗುತ್ತದೆ.

ಅಧ್ಯಕ್ಷರು : ನನ್ನದೇನೂ ಅಭ್ಯಂತರವಿಲ್ಲ. ಏನು ಹೇಳುತ್ತಿದ್ದೇನೆಂದರೆ, ಈಗ ಇದನ್ನು ಮುಗಿಸಿ, 30 ದಿವಸದಿಂದ ಪೆಂಡಿಂಗ್ ಇದೆ, ಸರ್ಕಾರದಿಂದ ಅದಕ್ಕೆ ಉತ್ತರವನ್ನು ಕೊಡಿಸಬೇಕು. ಇವತ್ತು ನಾವು ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭಿಸಲೇಬೇಕು. ಇದಕ್ಕೆ ಎಲ್ಲರೂ ಒಪ್ಪಿದ್ದೀರಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಈ ದಿನ ಶೂನ್ಯ ವೇಳೆಗೆ ಅವಕಾಶ ಕೊಡಿ, ಬೇಡಿಕೆಗಳ ಮೇಲೆ ಚರ್ಚೆಗೂ ಅವಕಾಶ ಕೊಡಬೇಕು. 6ನೇ ತಾರೀಖು ಬೆಳಿಗ್ಗೆ ಪ್ರಶ್ನೋತ್ತರ ಮುಗಿಯುತ್ತಿದ್ದ ಹಾಗೆ ಮೆಡಿಕಲ್ ಎಜ್ಯುಕೇಷನ್ ಬಗ್ಗೆ ರಿಪ್ಲೈಯನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ರಿಪ್ಲೈ ಅಲ್ಲ, ಡಿಮ್ಯಾಂಡ್ಸ್ ಇನ್‌ಷಿಯೇಟ್ ಆಗಬೇಕಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ : ಮೆಡಿಕಲ್ ಎಜ್ಯುಕೇಷನ್ ಮೇಲೆ ರಿಪ್ಲೈ ತೆಗೆದುಕೊಳ್ಳಿ ಎಂದು ಹೇಳಿದ್ದು, 6ನೇ ತಾರೀಖು ಬೆಳಿಗ್ಗೆ ಪ್ರಶ್ನೋತ್ತರ ಮುಗಿಯುತ್ತಿದ್ದಂತೆ ತೆಗೆದುಕೊಳ್ಳಿ.

ಅಧ್ಯಕ್ಷರು : ಶೂನ್ಯ ವೇಳೆ ನೋಟಿಸ್ ಕೊಟ್ಟಿರುವವರಿಗೆ ಮತ್ತೊಮ್ಮೆ ತಮ್ಮ ಮಾರ್ಗದರ್ಶನಕ್ಕಾಗಿ ಹೇಳುತ್ತಿದ್ದೇನೆ. ಬಹಳ ಸಂಕ್ಷಿಪ್ತವಾಗಿ ಒಂದು ನಿಮಿಷದಲ್ಲಿ ತಾವು ಪ್ರಸ್ತಾವನೆ ಮಾಡಬೇಕು. ಉತ್ತರ ಕೊಡುವವರು ಸಹ ಸಂಕ್ಷಿಪ್ತವಾಗಿ ಕೊಡಬೇಕು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಕುಂದಾಪುರ ಕ್ಷೇತ್ರದಲ್ಲಿ ರೌಡಿಗಳ ಪಟ್ಟಿ ಕುರಿತು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು

ಉತ್ತರವನ್ನು ಕೊಟ್ಟಿದ್ದರು. ನಮ್ಮ ತಾಲ್ಲೂಕಿನ ಪೋಲೀಸ್ ಸ್ಟೇಷನ್‌ನಲ್ಲಿರತಕ್ಕಂತಹ ರೌಡಿಗಳ ಪಟ್ಟಿಯ ಬಗ್ಗೆ ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ. ಅವರು ಉತ್ತರವನ್ನು ಕೊಡತಕ್ಕಂತಹ ಸಂದರ್ಭದಲ್ಲಿ ಎಷ್ಟು ಮುಚ್ಚಿಡುತ್ತಾರೆಂದರೆ ಅದು ಗುಪ್ತವಾಗಿರುವಂತಹ ವಿಚಾರವೆಂದು ಉತ್ತರವನ್ನು ಕೊಟ್ಟಿದ್ದಾರೆ. ಪೋಲೀಸ್ ಸ್ಟೇಷನ್‌ನಲ್ಲಿ ರೌಡಿಗಳ ಫೋಟೋವನ್ನು ಹಾಕುತ್ತಾರೆ. ನಾವು ಪ್ರಶ್ನೆಯನ್ನು ಕೇಳಿದರೆ ಇದು ಗುಪ್ತವಾಗಿರುವುದು ಎಂದು ಹೇಳುತ್ತಾರೆ. ಇದು ಪೋಲೀಸ್‌ನವರಿಗೆ ವ್ಯವಹಾರ ಮಾಡಲಿಕ್ಕೆ ಇರುವುದಾ, ಉತ್ತರ ಕೊಡಬೇಕಾದಂತಹ ವ್ಯವಸ್ಥೆಯಲ್ಲಿ ನಮಗೆ ಸಮರ್ಪಕವಾದ ಉತ್ತರ ಕೊಡಲು, ತಾವು ಅದಕ್ಕೆ ಸಹಿಯನ್ನು ಹಾಕುತ್ತೀರಿ. ಸಹಿ ಹಾಕುವಾಗಲಾದರೂ ತಾವು ಅದನ್ನು ನೋಡಬೇಕಾಗುತ್ತದೆ. ಸಮಾಜಘಾತುಕ ಶಕ್ತಿಗಳ ಫೋಟೋಗಳು ಪೋಲೀಸ್ ಸ್ಟೇಷನ್‌ನಲ್ಲಿರುತ್ತದೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, ಅಂಥದ್ದೇನಾದರೂ ಇದ್ದರೆ ಅಂತಹ ಸಾಕ್ಷಿಗಳನ್ನು ನನಗೆ ತೆಗೆದುಕೊಂಡು ಬಂದು ಕೊಟ್ಟರೆ ನಾನು ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾನು ಕೇಳಿರತಕ್ಕಂಥದ್ದಕ್ಕೆ ತಾವು ಸಹಿ ಮಾಡಿರುವಂತಹ ಸಂದರ್ಭದಲ್ಲಿ ವಿಧಾನಸಭೆಗೆ ಬರತಕ್ಕಂತಹ ಪ್ರಶ್ನೆಗಳಿಗೆ ಜವಾಬ್ದಾರಿಯುತವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ಇವತ್ತು ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಸಿಕ್ಕಿದ್ದರಿಂದ ಪ್ರಶ್ನೆಯನ್ನು ಕೇಳಿದೆವು. ಇಲ್ಲದಿದ್ದರೆ ಇಂತಹ ಪ್ರಶ್ನೆಗಳನ್ನು ಕೇಳುವುದಕ್ಕೆ ಹಕ್ಕುಚ್ಯುತಿ ತರಬೇಕಾಗುತ್ತದೆ.

ಅಧ್ಯಕ್ಷರು : ಅವರು ಏನು ಹೇಳುತ್ತಾರೆಂದರೆ, ನೀವು ರೋಗ್ಸ್ ಗ್ಯಾಲರಿಯಲ್ಲಿ ಡಿಸ್‌ಪ್ಲೇ ಮಾಡಿರುತ್ತಾರಲ್ಲಾ, ಅಲ್ಲಿ ಓಪನ್ ಗ್ಯಾಲರಿಯಲ್ಲಿ ಡಿಸ್‌ಪ್ಲೇ ಮಾಡಿರುತ್ತಾರೆ. ಇಲ್ಲಿ ರಿಪ್ಲೈ, ಕೊಡುವಾಗ ಸೀಕ್ರೆಟ್ ಡಾಕ್ಯೂಮೆಂಟ್ಸ್ ಎಂದು ಹೇಳುತ್ತೀರಿ. ಆ ತರಹದ ಕಾಂಟ್ರಡಿಕ್ಷನ್ಸ್ ಆಗಬಾರದು. ಇನ್‌ಫರ್‌ಮೇಷನ್‌ನಮಗೆ ಆಕ್ಸ್‌ಸಿಬೆಲ್ ಆಗಿರಬೇಕು ಎಂದು ಹೇಳುತ್ತಾರೆ. I have taken note of your suggestion.

ಕೊಡಗು ಜಿಲ್ಲಾಪಂಚಾಯಿತಿಗೆ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಬಿಡುಗಡೆ ಮಾಡಿರುವ ಹಣ

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಕೊಡಗು ಜಿಲ್ಲಾ ಪಂಚಾಯಿತಿಗೆ ಬಿಡುಗಡೆಯಾದ ಅನುದಾನದಲ್ಲಿ ರೂ.1.15 ಕೋಟಿ ಹಣವು ಯಾವುದೇ ಕಾಮಗಾರಿಗೆ ಬಳಕೆಯಾಗದೆ ಸರ್ಕಾರ ವಾಪಸ್ಸು ಪಡೆದಿದ್ದು ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿರುವ ಹಿನ್ನೆಯನ್ನು ಪರಿಶೀಲಿಸಿ ಈ ಕೊಡಲೇ ಹಣವನ್ನು ಬಿಡುಗಡೆ ಮಾಡಬೇಕೆಂದು ಕೋರುತ್ತಿದ್ದೇನೆ. ತಾವು ನಿರ್ದಿಷ್ಟವಾಗಿ ಯಾವತ್ತು ಬಿಡುಗಡೆ ಮಾಡುತ್ತೀರೆಂದು ಈ ಸದನದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕೆಲವು ಯೋಜನೇತರ ಕಾಮಗಾರಿಗಳನ್ನು ಪೂರೈಸಿ 2 ವರ್ಷಗಳಾಗಿದೆ. ಇದುವರೆಗೂ ಆ ಹಣವನ್ನು ಸಂದಾಯ ಮಾಡದೆ ನಿನ್ನೆ ದಿನ ನಮ್ಮ ಕೊಡಗು ಜಿಲ್ಲೆಯಲ್ಲಿ ಕಂಟ್ರಾಕ್ಟರ್‌ಗಳು ಕಛೇರಿಗೆ ಬೀಗವನ್ನು ಹಾಕತಕ್ಕಂತಹ ಕೆಲಸವನ್ನು ಮಾಡಿದ್ದಾರೆ. ಇದರ